ವಿಷಯ: ರಾಜ್ಯದಲ್ಲಿರುವ ಖನಿಜ ಸಂಪತ್ತು

2556 (3220)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಿಗುವ ಖನಿಜ ಸಂಪತ್ತಿಗೆ ಕೇಂದ್ರ ಸರ್ಕಾರದ ಆದೇಶದ ಮೇಲೆ ರಾಜ್ಯ ಸರ್ಕಾರಕ್ಕೆ ಟನ್ 1ಕ್ಕೆ ಸಿಗುವ ಹಣ ಎಷ್ಟು? ಇದನ್ನು ಯಾವಾಗ ಜಾರಿಗೆ ತರಲಾಯಿತು?

ಶ್ರೀ ಎನ್.ಡಿ.ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ರಾಜ್ಯದಲ್ಲಿ ಸಿಗುವ ಖನಿಜ ಸಂಪತ್ತಿಗೆ ಕೇಂದ್ರ ಸರ್ಕಾರವು ಒಂದೊಂದು ಖನಿಜಕ್ಕೆ ಒಂದೊಂದು ತರಹ ರಾಜಧನವನ್ನು ನಿಗದಿಮಾಡಿರುತ್ತಾರೆ. ಕೇಂದ್ರ ಸರ್ಕಾರವು ಈಗ ನಿಗದಿಪಡಿಸಿರುವ ಪರಿಷ್ಕೃತ ರಾಜಧನವು ದಿನಾಂಕ 11-4-97ರಿಂದ ಜಾರಿಗೆ ಬಂದಿರುತ್ತದೆ.

ವಿಷಯ: ಬಂಟ್ವಾಳ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ.

2562 (3943)

ಶ್ರೀ ರುಕ್ಕಯ್ಯ ಪೂಜಾರಿ (ವಿಟ್ಲ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಟ್ವಾಳ ನಗರ ಪಂಚಾಯತ್ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದಲ್ಲಿ, ಈಗ ಕುಡಿಯುವ ನೀರಿನ ಯೋಜನೆಯ ಕಾಮಗಾರಿ ಕೆಲಸವು ಪ್ರಾರಂಭ ಮಾಡಲಾಗಿದೆಯೇ?

ಇ) ಇದರಿಂದ ಎಲ್ಲಾ ಪ್ರದೇಶಗಳಿಗೆ ಅನುಕೂಲವಾಗುವುದಿಲ್ಲವೇ?

ಈ) ಇದನ್ನು ಸರಿಪಡಿಸಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದು?

ಶ್ರೀ ಬಿ.ಎನ್ ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

ಅ) ಬಂಟ್ವಾಳ ನಗರ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟ ಶಾಂತಿಗುಡ್ಡೆ, ಬೊಂಡಾಲ, ರಂಗೇಲು, ಉಪ್ಪುಗುಡ್ಡೆ, ಬಂಗ್ಲೆ ಗುಡ್ಡೆ ನಂದಾವರ ಬೆಟ್ಟ ಮತ್ತು ಮೊಡಂಕಾಪು